# ಜಲದ ನೀಲ ಗಾತ್ರ ಏತರ ಚೆಲುವ ರುಕ್ಮಿಣಿ

**(ರುಕ್ಮಿಣಿ – ಪಾರ್ವತಿ ಸಂವಾದ)**

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 53.
2. **Note:** This song is not available in other standard books.
3. **Note:** Lyrics given without highlights are as per Ref. 1. The wordings given in yellow highlights are as per the singer.

ರಾಗ: ಮಧ್ಯಮಾವತಿ ತಾಳ: ರೂಪಕ

ಜಲದ ನೀಲ ಗಾತ್ರ ಏತರ ಚೆಲುವ ರುಕ್ಮಿಣಿ
ಬಿಳಿಯ ಜಡೆಯ ಮೈಯ ಜೋಗಿಗೊಲೆದ ಪಾರ್ವತಿ ॥ ಪ ॥

ಉದಕದೊಳಗೆ ವಾಸವೇಕೆ ಸದನವಿಲ್ಲವೆ
ಸುದತಿ ಸುಡುವ ಕಾಡಿಗಿಂತ ಲೇಸು ಅಲ್ಲವೆ ॥ ೧ ॥

ಶೃಂಗಿಯ ಬೆನ್ನಿಲೆತ್ತಿದವನ ಸೊಗಸು ನೋಡಿದೆ
ಗಂಗೆಯ ಶಿರದಿ ಪೊತ್ತವನ ಗರುವ ಕೇಳಿದೆ ॥ ೨ ॥

ವಸುಧೆ ನೆಗಹಿ ಬೇರ ಮೆಲುವ ಅಶನವಿಲ್ಲವೆ
ಹಸಿದು ವಿಷವ ಕುಡಿದು ಎಂತು ಸ್ವಾದವಲ್ಲವೆ ॥ ೩ ॥

ಕರುಳ ಕೊರಳ ಸರವು ಏಕೆ, ಸರವು ದೊರಕದೆ
ಕೊರಳ ರುಂಡ ಮಾಲೆ ಏಕೆ ಕಾಂಚನವಿಲ್ಲವೆ ॥ ೪ ॥

ಧರಣಿ ಮೂರಡಿ ಬೇಡಲಿಕ್ಕೆ ದೊರೆಯು ಅಲ್ಲವೆ
ನರ ಕಪಾಲ ಪಿಡಿವ ಜಗದ ಕರ್ತೃವಲ್ಲವೆ ॥ ೫ ॥

ಮಾತೆಯ ಶಿರವ ಅಳಿದವನ ಮಾತು ಕೇಳಿದೆಯಾ

ತಾತನಾಗಿ ಸುತನ ಕೊಂದ ನೀತಿ ನೋಡಿದೆಯಾ || ೬ ||

ಕೋತಿಗಳನು ಕೂಡಲಿಕ್ಕೆ ಜಾತಿ ತನ್ನದೆ
ಭೂತ ಗಣಗಳಾಳುವುದಕೆ ಭೀತಿಯಿಲ್ಲವೆ || ೭ ||

ಕಂಜ ನೇತ್ರ ಹಾವು ತುಳಿಯೆ ಅಂಜಿಕೆ ಬಾರದೆ
ಮಂಜುಳ ವಚನ ಮೈಯಲ್ಲ ಸರ್ಪ ಕುಂಜರ ಭೂಷಣ || ೮ ||

ಸುತ್ತಲಿದ್ದ ಬಾಲೆಯರೊಳು ಬತ್ತಲಿರುವರೆ
ಉತ್ತಮಳಾದ ವನಿತೆ ಶಾಪ ಹತ್ತಲಿಲ್ಲವೆ || ೯ ||

ಹತ್ತಿರಿದ್ದ ವಾಜಿಯ ಬಿಟ್ಟು ಹದ್ದನೇರ್ವರೆ
ಎತ್ತಿನ ಬೆನ್ನೇರಿದವನು ಉತ್ತಮನಾಹನೆ || ೧೦ ||

ಹರಿಹರರೊಳು ಭೇದವೇನು ಹೇಳೆ ರುಕ್ಮಿಣಿ
ಪುರಂದರ ವಿಠಲ ತಾನೆ ಬಲ್ಲ ಕೇಳೆ ಪಾರ್ವತಿ || ೧೧ ||

**Note:** Below given lyrics are as per the singer. These wordings are different from the lyrics as in Ref. 1.

ಜಲದಿ ನಿಲಯಗಾರ ಏತರ ಚೆಲುವ ರುಕ್ಮಿಣಿ
ಬಿಳಿಯ ಮೈಯ ಬೂದಿ ಶಿವಗೆ ಒಲಿದೆ ಪಾರ್ವತಿ || ಪ ||

ಉದಕದೊಳಗೆ ವಾಸವೇಕೆ ಸದನವಿಲ್ಲವೆ
ಸುದತಿ ಸುಡುಗಾಡಿಗಿಂತ ಲೇಸು ಅಲ್ಲವೆ || 1 ||

ಶೃಂಗ ಬೆನ್ನಲಿ ಪೊತ್ತವನ ಸುದ್ದಿ ಕೇಳಿದ್ಯಾ
ಗಂಗೆ ಜಡೆಯಲಿಟ್ಟವನ ಗರುವ ಕೇಳಿದ್ಯ || 2 ||

ವಸುಧೆ ನೆಗಹಿ ಬೇರು ಮೆಲ್ಲಲು ಅಶನವಿಲ್ಲವೆ
ಹಸಿದು ವಿಷವ ನುಂಡುದೆಲ್ಲ ಹುಸಿಯು ಅಲ್ಲವೆ || 3 ||

ಕೊರಳ ಕರುಳ ಮಾಲೆ ಯಾಕೆ ಸರವು ದೊರಕದೆ
ರುಂಡ ಮಾಲೆ ಧರಿಸಿದವನು ಕಾಂತನಲ್ಲವೆ ॥ 4 ॥

ವಸುಧಿಗೀಶನಾಗಿ ಬಲಿಯ ಬೇಡಲಿಲ್ಲವೆ
ಎಸೆವ ಕಪಾಲ ಪಿಡಿದ ಕರ್ತನಲ್ಲವೆ ॥ 5 ॥

ಮಾತೆ ಶಿರವ ತರಿದವನ ಮಾತು ಕೇಳಿದ್ಯಾ
ತಾತನಾಗಿ ಸುತನ ಕೊಂದ ನೀತಿ ಕೇಳಿದ್ಯಾ ॥ 6 ॥

ಕೋತಿಗಳನು ಕೂಡಲ್ಯಾಕೆ ಜಾತಿ ತನ್ನದೆ
ಭೂತ ಗಣಗಳಾಳುವುದಕೆ ನೀತಿ ಪೇಳ್ವಲೆ ॥ 7 ॥

ಕಂಜ ನೇತ್ರ ಹಾವು ತುಳಿಯಲಂಜಿಕೆ ಬಾರದೇ
ಮಂಜುಳ ವದನೆ ಮೈಯಲ್ಲ ಸರ್ಪ ಕುಂಜರ ಭೂಷಣಗೆ ॥ 8 ॥

ಸುತ್ತಲಿದ್ದ ಸ್ತ್ರೀಯರೊಳು ಬತ್ತಲೆ ನಿಲುವರೆ
ಉತ್ತಮರಾದ ಸ್ತ್ರೀಯರ ಶಾಪ ಹತ್ತಲಿಲ್ಲವೆ ॥ 9 ॥

ಹತ್ತಲಿದ್ದ ವಾಜಿಯ ಬಿಟ್ಟು ಹದ್ದನೇರುವರೇ
ಎತ್ತಿನ ಬೆನ್ನೇರಿದವನು ಉತ್ತಮನಾಹನೆ ॥ 10 ॥

ಹರಿಹರರೊಳು ಯಾರು ಶ್ರೇಷ್ಟ ಹೇಳೆ ರುಕ್ಮಿಣಿ
ಪುರಂದರ ವಿಠಲ ಸರ್ವೋತ್ತಮನು ಕೇಳೆ ಪಾರ್ವತಿ ॥ 11 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದೊಂದು ವ್ಯಾಜ ಸ್ತುತಿಯ ರೀತಿ. ಪಾರ್ವತಿ ಮತ್ತು ಲಕ್ಷ್ಮಿಯರು ಪರಸ್ಪರ ವಿವಾದದಲ್ಲಿ ಹರಿಹರರ ಲೀಲೆಯನ್ನು ವಿವರಿಸಿದ ರೀತಿ ವಿನೋದಕರವಾಗಿದೆ.

೧. **ಜಲದ** = ಮೋಡ

**ಜಲದ ನೀಲಗಾತ್ರ** = ಮೇಘಶ್ಯಾಮ

**ಬಿಳಿಯ ಜಡೆಯ ಮೈಯ =** ಭಸ್ಮದಿಂದ ಬಿಳಿದಾದ ಜಡೆ ಮತ್ತು ಮೈಯುಳ್ಳವ

**ಉದಕ** = ನೀರು

**ಉದಕದೊಳಗೆ ವಾಸ** = ಮತ್ಸ್ಯಾವತಾರ

**೨. ಶೃಂಗಿ** = ಮಂದರ ಪರ್ವತ **ಶೃಂಗ** = ಕೊಡು, ಶಿಖರ

**೩. ವಸುಧೆ ನೆಗಹಿ ಬೇರೆ ......** = ವರಾಹಾವತಾರ, **ವಸುಧೆ** = ಭೂಮಿ, ಪೃಥ್ವಿ, **ನೆಗಹು** = ಎತ್ತು, ಚಿಮ್ಮು, **ಅಶನ** = ಅನ್ನ, ಆಹಾರ, ಊಟ

**ಹಸಿದು ವಿಷವ ಕುಡಿದು .....** = ಶಿವನು ಹಾಲಾಹಲ ಕುಡಿದ ಪ್ರಸಂಗ

೪. **ಕರುಳ ಕೊರಳ ಸರವು .....** = ನರಸಿಂಹಾವತಾರ

**೫. ಧರಣಿ ಮೂರಡಿ ಬೇಡಲು .....** = ವಾಮನವತಾರ

**ಜಗದ ಕರ್ತೃ** = ಪದವು ಬೇರೆಯಾದಂತಿದೆ, **ಕಪಾಲ** = ತಲೆ ಬುರುಡೆ

**೬. ಮಾತೆಯ ಶಿರವ ಅಳಿದವನ .....** = ಪರಶುರಾಮಾವತಾರ

**ಸುತನ ಕೊಂದ** = ಮಗನಾದ ಗಣಪತಿಯ ರುಂಡ ಹಾರಿಸಿದ

**೭. ಕೋತಿಗಳನು ಕೂಡಲಿಕ್ಕೆ .....** = ರಾಮಾವತಾರ

**೮. ಕಂಜ ನೇತ್ರ ಹಾವು ತುಳಿಯೆ ......** = ಕೃಷ್ಣಾವತಾರ, **ಕುಂಜರ** = ಆನೆ, **ಕಂಜ** = ಕಮಲ, ತಾವರೆ

**೯. ಸುತ್ತಲಿದ್ದ ಬಾಲೆಯರೊಳು ಬತ್ತಲಿರುವರೆ** = ಬೌದ್ಧಾವತಾರ

**೧೦. ಹತ್ತಿರಿದ್ದ ವಾಜಿಯ ಬಿಟ್ಟು .......** = ಕಲ್ಕ್ಯಾವತಾರ **ವಾಜಿ** = ಕುದುರೆ, ಬಾಣ, ಅಂಬು

**Classification:** Keerthane
**Ankita:** Purandara Vittala
**Location:** NA
**Category:** dashavatara
**Sub-Category:** dashavatara, parvata, bhumi, uraga, kudure, niru, Rukmini, Parvati, gange, anna, visha, loka, tayi, koti, padma, shapa, shiva, Krishna, haddu,
**Pravachana:** NA
**Explanation:** NA